ವಿಧಾನ ಸೌಧದ ಮುಂದೆ ಸ್ಥಾಪಿಸಿರುವ ಕೆಂಗಲ್ ಹನುಮಂತಯ್ಯನವರ ಪ್ರತಿಮೆ ಸ್ವರೂಪ

೧೭ ಶ್ರೀ ಜಿ. ರಾಜೂ ಗೌಡ (ಹನೂರು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಿಧಾನ ಸೌಧದ ಪಶ್ಚಿಮ ದ್ವಾರದಲ್ಲಿ ಸ್ಥಾಪಿಸಿರುವ ಕೆಂಗಲ್ ಹನುಮಂತಯ್ಯನವರ ಪ್ರತಿಮೆಯ ಸ್ವರೂಪ ಬದಲಾಯಿಸಲು ಸರ್ಕಾರದ ಮೇಲೆ ಒತ್ತಡ ಬಂದಿದೆಯೇ ?

ಆ) ಹಾಗಾದರೆ ಈ ಬಗ್ಗೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಯವರು).—

ಅ) ವಿಧಾನ ಸೌಧದ ಪಶ್ಚಿಮ ದ್ವಾರದಲ್ಲಿ ಸ್ಥಾಪಿಸಿರುವ ಕೆಂಗಲ್ ಹನುಮಂತಯ್ಯನವರ ಪ್ರತಿಮೆಯ ಸ್ವರೂಪವನ್ನು ಬದಲಾಯಿಸಲು ಸಾಕಷ್ಟು ಮನವಿಗಳು ಬಂದಿವೆ.

ಆ) ಹೊಲಿ ಇರುವ ಕೆಂಗಲ್ ಹನುಮಂತಯ್ಯನವರ ಪ್ರತಿಮೆಯನ್ನು ಬದಲಾಯಿಸಲು ಸೂಕ್ತ ಕ್ರಮ ತೆಗೆದುಕೊಂಡು ತಿರುವನಂತಪುರದ ಶ್ರೀ ಕಾನ್ನಿರಾಮನ್‌ರವರನ್ನು ಪ್ರತಿಮೆ ತಯಾರಿಸಲು ಗೊತ್ತು ಪಡಿಸಿ ಅವರಿಗೆ ದಿನಾಂಕ ೨-೧೨-೮೯ರಂದು ಆದೇಶ ನೀಡಲಾಗಿದೆ.

ರಾಜ್ಯದ ವಿವಿಧ ಮೂಲಗಳಿಂದ ದೊರೆಯುತ್ತಿರುವ ವಿದ್ಯುತ್ ಪ್ರಮಾಣ

೨೨ ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ).— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ವಿವಿಧ ಮೂಲಗಳಿಂದ ದೊರೆಯುತ್ತಿರುವ ವಿದ್ಯುತ್‌ನ ಪ್ರಮಾಣವೆಷ್ಟು ?

ಆ) ರಾಜ್ಯ ಕೇಂದ್ರ ಸರ್ಕಾರದ ಯೋಜನೆಗಳಿಂದ ಪಡೆಯುತ್ತಿರುವ ವಿದ್ಯುತ್‌ನ ಪ್ರಮಾಣವೆಷ್ಟು?

ಇ) ಹೊರ ರಾಜ್ಯಗಳಿಂದ ಪಡೆಯುತ್ತಿರುವ ವಿದ್ಯುತ್‌ನ ಪ್ರಮಾಣವೆಷ್ಟು ?

ಈ) ಕರ್ನಾಟಕ ರಾಜ್ಯವು ಬೇರೆ ರಾಜ್ಯಗಳಿಗೆ ವಿದ್ಯುತ್‌ನ್ನು ನೀಡುತ್ತಿದೆಯೆ ಹಾಗಿದ್ದರೆ ಅದರ ಪ್ರಮಾಣ ಎಷ್ಟು ?

ಉ) ರಾಜ್ಯದಲ್ಲಿ ವಿದ್ಯುತ್‌ನ್ನು ಖೋತಾ ರಹಿತವಾಗಿ ಒದಗಿಸಿದ ಲ್ಲಿ ಬೇಕಾಗುವ ವಿದ್ಯುತ್‌ನ ಪ್ರಮಾಣವೆಷ್ಟು ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ಸರಾಸರಿ ೫೦.೫೦ ದಶಲಕ್ಷ ಯೂನಿಟ್‌ಗಳು (ದಿನವೊಂದಕ್ಕೆ)

ಆ) ದಿನವೊಂದಕ್ಕೆ ಸುಮಾರು ೯.೦೦ ದಶಲಕ್ಷ ಯೂನಿಟ್‌ಗಳು

ಇ) ದಿನವೊಂದಕ್ಕೆ ೨.೦೦ ದಶಲಕ್ಷ ಯೂನಿಟ್‌ಗಳು.

ಈ) ಇಲ್ಲ.

ಉ) ದಿನವೊಂದಕ್ಕೆ ಸುಮಾರು ೫೧.೮೦ ದಶಲಕ್ಷ ಯೂನಿಟ್‌ಗಳು

ವಿದ್ಯುಚ್ಛಕ್ತಿ ಮಂಡಳಿಗೆ ಬರಬೇಕಾದ ಬಾಕಿ

೨೩ ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ).—ಮಾನ್ಯ ನೀರಾವರಿ ಲೋಕೋಪಯೋಗಿ ಹಾಗೂ ಇಂಧನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ (ಕೆ. ಇ. ಬಿ.)ಗೆ ಕಳೆದ ಮೂರು ವರ್ಷಗಳಿಂದ ೧ ಲಕ್ಷಕ್ಕಿಂತಲೂ ಅಧಿಕ ವಿದ್ಯುತ್ ಬಿಲ್ಲುಗಳನ್ನು ಪಾವತಿ ಮಾಡದೆ ಇರುವುದರಿಂದ ಬರಬೇಕಾದ ಬಾಕಿಯ ಮೊತ್ತವೆಷ್ಟು ?